# ಕರ್ನಾಟಕ ಸರ್ಕಾರ
# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003

ಸಂಖ್ಯೆ: ಕ್ಯೂ1/ಡಿ.ಇಎಲ್.ಇಡಿ/ಡಿ.ಇಡಿ/ಪೂ.ಪ/ಡಿಸೆಂಬರ್ 2018/31 /2018-19 ದಿನಾಂಕ:27.09.2018.

## ಅಧಿಸೂಚನೆ

ವಿಷಯ: ಡಿಸೆಂಬರ್-2018ರಲ್ಲಿ ನಡೆಸಲಾಗುವ ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ಪೂರಕ ಪರೀಕ್ಷೆಗೆ (Only Theory) ಸರ್ಕಾರಿ ಮತ್ತು ಮಾನ್ಯತೆ ಪಡೆದ ಶಿಕ್ಷಕರ ತರಬೇತಿ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ218/ಎಸ್.ಎಲ್.ಬಿ/2016/ಬೆಂಗಳೂರು; ದಿನಾಂಕ:14.12.2016.
2. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು ರವರು ಹೊರಡಿಸಿರುವ ಕರ್ನಾಟಕ ಪ್ರಾಥಮಿಕ ಶಿಕ್ಷಕ ಶಿಕ್ಷಣ ಪಠ್ಯಕ್ರಮ 2012ಕ್ಕೆ ನೀಡಿರುವ ಸ್ಪಷ್ಟೀಕರಣ ದಿನಾಂಕ:26.05.2015ರಂತೆ.
3. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು ರವರು ಹೊರಡಿಸಿರುವ ಕರ್ನಾಟಕ ಪ್ರಾಥಮಿಕ ಶಿಕ್ಷಕ ಶಿಕ್ಷಣ ಪಠ್ಯಕ್ರಮ ಪರಿಷ್ಕೃತ 2016ಕ್ಕೆ ನೀಡಿರುವ ಸ್ಪಷ್ಟೀಕರಣ ಪತ್ರ ಸಂಖ್ಯೆ: ಶಿತ1/ಡಿ.ಇಎಲ್.ಇಡಿ/ಪ.ನಿ/01/2016-17;ದಿನಾಂಕ:30.01.2017ರಂತೆ.

***********

ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ಡಿಸೆಂಬರ್-2018ರ ಪೂರಕ ಪರೀಕ್ಷೆಯನ್ನು (Only Theory) ದಿನಾಂಕ:10.12.2018 ರಿಂದ ದಿನಾಂಕ:15.12.2018 ರವರೆಗೆ ಮಂಡಳಿಯ ವತಿಯಿಂದ ನಡೆಸಲು ತೀರ್ಮಾನಿಸಲಾಗಿದೆ. ರಾಜ್ಯದ ಸರ್ಕಾರಿ ಮತ್ತು ಎನ್.ಸಿ.ಟಿ.ಇ ಯಿಂದ ಮಾನ್ಯತೆ ಪಡೆದು ಕಾರ್ಯ ನಿರ್ವಹಿಸುತ್ತಿರುವ ಖಾಸಗಿ ಡಿ.ಇಡಿ ಸಂಸ್ಥೆಗಳ ಪುನರಾವರ್ತಿತ (ಅನುತ್ತೀರ್ಣ) ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವೇಳಾಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.

1. <u>ಪ್ರಥಮ/ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ಪುನರಾವರ್ತಿತ (ಅನುತ್ತೀರ್ಣ) ವಿದ್ಯಾರ್ಥಿಗಳು ಪಾವತಿಸಬೇಕಾಗಿರುವ ಪರೀಕ್ಷಾ ಶುಲ್ಕದ ವಿವರ:-</u>

   a) ಒಂದು ವಿಷಯಕ್ಕೆ : ರೂ.250-00

   b) ಎರಡು ವಿಷಯಕ್ಕೆ : ರೂ.500-00

   c) ಎರಡಕ್ಕಿಂತ ಹೆಚ್ಚು ವಿಷಯಗಳಿಗೆ : ರೂ.900-00

   ಪುನರಾವರ್ತಿತ ವಿದ್ಯಾರ್ಥಿಗಳು ಈಗಾಗಲೇ ಲ್ಯಾಮಿನೇಷನ್ ಶುಲ್ಕ ಪಾವತಿಸಿರುವುದರಿಂದ, ಪುನಃ ಲ್ಯಾಮಿನೇಷನ್ ಶುಲ್ಕ ಪಾವತಿಸುವ ಅಗತ್ಯವಿರುವುದಿಲ್ಲ.

2. <u>ಪರೀಕ್ಷಾ ಶುಲ್ಕದ ವಿನಾಯಿತಿ:-</u>

   ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಪ್ರವರ್ಗ1ರ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಇದೆ. ಆದರೆ ದಂಡ ಶುಲ್ಕದಿಂದ ವಿನಾಯಿತಿ ಇರುವುದಿಲ್ಲ. ಪರೀಕ್ಷಾ ಶುಲ್ಕ ವಿನಾಯಿತಿ ಇರುವಂತಹ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು

ಪ್ರವರ್ಗ-1ರ ಅಭ್ಯರ್ಥಿಗಳ ಶುಲ್ಕವನ್ನು ಸಂಬಂಧಿಸಿದ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಅಲ್ಪ ಸಂಖ್ಯಾತರ ನಿರ್ದೇಶನಾಲಯದಿಂದ ನಿಯಮಾನುಸಾರ ಪಡೆದು ಸದರಿ ಮೊಬಲಗನ್ನು NEFT CHALLAN ಮುಖಾಂತರ ಮಂಡಳಿಗೆ ಪಾವತಿಸಿ ಚಲನ್ ಪ್ರತಿ ಸಲ್ಲಿಸಲು ತಿಳಿಸಿದೆ.

ಈ ಹಿಂದಿನ ಸಾಲುಗಳಲ್ಲಿ ಶುಲ್ಕ ಪಾವತಿಸದೇ ಇರುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಪ್ರವರ್ಗ-1ರ ಅಭ್ಯರ್ಥಿಗಳ ಹೆಸರು ಹಾಗೂ ಸಂಖ್ಯೆಯನ್ನು ತಪ್ಪದೇ ನಮೂದಿಸಿ, ಅಂತಹ ಅಭ್ಯರ್ಥಿಗಳ ಬಾಕಿ ಪರೀಕ್ಷಾ ಶುಲ್ಕವನ್ನು ಸಂಸ್ಥೆಯ ಪ್ರಾಂಶುಪಾಲರು ಅತಿ ತುರ್ತಾಗಿ ವಿವರಗಳೊಂದಿಗೆ NEFT CHALLAN ಮುಖಾಂತರ ಪಾವತಿಸಿ ಚಲನ್ ಪ್ರತಿಯೊಂದಿಗೆ ವರದಿಯನ್ನು ಮಂಡಳಿಗೆ ತಪ್ಪದೇ ಕಳುಹಿಸಲು ತಿಳಿಸಿದೆ.

ಎಲ್ಲಾ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಒಟ್ಟಿಗೆ ಲೆಕ್ಕಾಚಾರ ಮಾಡಿ NEFT CHALLAN ಮೂಲಕ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸಬೇಕು. ಪಾವತಿಸುವ ಚಲನ್‌ನಲ್ಲಿ ವಿವರಗಳನ್ನು ನಮೂದಿಸಬೇಕು. ಭರ್ತಿ ಮಾಡಿದ NEFT CHALLAN ಮಂಡಳಿಗೆ ಕಳುಹಿಸಬೇಕು. ಶುಲ್ಕ ಪಾವತಿಸಿದ ಬಗ್ಗೆ ಚಲನ್‌ನಲ್ಲಿ ಬ್ಯಾಂಕಿನ ಮೊಹರು ಮತ್ತು ಟಿ.ಎಸ್.ಎಲ್ ಅಥವಾ ಯು.ಟಿ.ಆರ್ (T.S.L OR U.T.R) ಇರುವುದನ್ನು ಖಾತ್ರಿಪಡಿಸಿಕೊಳ್ಳುವುದು. ಶಿಕ್ಷಕರ ತರಬೇತಿ ಸಂಸ್ಥೆಗಳು ಛಾಯಾಪ್ರತಿಯನ್ನು ದಾಖಲೆಯಾಗಿ, ಸುರಕ್ಷಿತವಾಗಿ ಸಂರಕ್ಷಿಸಿಕೊಳ್ಳತಕ್ಕದ್ದು.

ವಿದ್ಯಾರ್ಥಿಗಳ ಎಂ.ಎಸ್.ಎ, ನಾಮಿನಲ್‌ರೋಲ್ ಮತ್ತು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ NEFT CHALLAN ಮೂಲಕ ಶುಲ್ಕ ಜಮಾ ಮಾಡಿರುವ ಚಲನ್‌ಗಳನ್ನು ಮಂಡಳಿಗೆ ಕಳುಹಿಸುವುದು. **ಹಣಕಾಸು ನಮೂನೆ 01 ರಿಂದ 04 ನ್ನು ಪೂರ್ಣ ಭರ್ತಿ ಮಾಡಿ ಸಲ್ಲಿಸುವುದು.**

ಮಂಡಳಿಗೆ ಪಾವತಿಸಿರುವ ಪರೀಕ್ಷಾ ಶುಲ್ಕ ಲೆಕ್ಕಾಚಾರ ಸರಿಯಿರುವ ಬಗ್ಗೆ ಜಿಲ್ಲಾ ಡಯಟ್ ಪ್ರಾಂಶುಪಾಲರು ಖಾತ್ರಿಪಡಿಸಿಕೊಳ್ಳಬೇಕು. ನಿಗದಿತ ಶುಲ್ಕ ಪಾವತಿ ಮಾಡಿದಲ್ಲಿ ಮಾತ್ರ ಪರೀಕ್ಷಾ ಅರ್ಜಿಗಳನ್ನು ಸ್ವೀಕರಿಸಬೇಕು.

3. ಎಂ.ಎಸ್.ಎ ಮತ್ತು ನಾಮಿನಲ್‌ರೋಲ್‌ಗಳನ್ನು ಸಲ್ಲಿಸಲು ನಿಗಧಿಗೊಳಿಸಿರುವ ದಿನಾಂಕಗಳ ವಿವರ:-

| ಕ್ರಮ ಸಂಖ್ಯೆ | ವಿವರ | ನಿಗಧಿಪಡಿಸಲಾದ ಅಂತಿಮ ದಿನಾಂಕ |
|---|---|---|
| 01 | ವಿದ್ಯಾರ್ಥಿಯು ಪರೀಕ್ಷಾ ಅರ್ಜಿ ಮತ್ತು ಶುಲ್ಕ ಪಾವತಿಸಲು ಕೊನೆಯ ದಿನಾಂಕ | 15.10.2018 |
| 02 | ಪರೀಕ್ಷಾ ಶುಲ್ಕದ ಮೊತ್ತವನ್ನು NEFT CHALLAN ಮುಖಾಂತರ ಮಂಡಳಿಗೆ ಜಮಾ ಮಾಡಲು ಕೊನೆಯ ದಿನಾಂಕ | 16.10.2018 |
| 03 | ಪರೀಕ್ಷಾ ಅರ್ಜಿಗಳು (ಎಂ.ಎಸ್.ಎ), ನಾಮಿನಲ್‌ರೋಲ್, NEFT CHALLAN ಗಳನ್ನು ಆಯಾ ಜಿಲ್ಲಾ ಡಯಟ್‌ಗೆ ಸಲ್ಲಿಸಲು ಕೊನೆಯ ದಿನಾಂಕ | 17.10.2018 |
| 04 | ವಿದ್ಯಾರ್ಥಿಯು ದಂಡ ಶುಲ್ಕ ಸಹಿತವಾಗಿ ಪರೀಕ್ಷಾ ಅರ್ಜಿ ಸಲ್ಲಿಸಲು (ದಿನವೊಂದಕ್ಕೆ 150/- ರೂ.ಗಳಂತೆ) ಕೊನೆಯ ದಿನಾಂಕ | 23.10.2018 |
| 05 | ದಂಡ ಶುಲ್ಕ ಮೊತ್ತವನ್ನು ಮಂಡಳಿಗೆ NEFT CHALLAN ಮುಖಾಂತರ ಪಾವತಿಸಲು ಕೊನೆಯ ದಿನಾಂಕ | 25.10.2018 |
| 06 | ದಂಡ ಶುಲ್ಕ ಸಹಿತ ಪರೀಕ್ಷಾ ಅರ್ಜಿಗಳು (ಎಂ.ಎಸ್.ಎ), ನಾಮಿನಲ್‌ರೋಲ್, NEFT CHALLAN ಮತ್ತು ಹಣಕಾಸು ನಮೂನೆಗಳನ್ನು ಆಯಾ ಜಿಲ್ಲಾ ಡಯಟ್‌ಗೆ ಸಲ್ಲಿಸಲು ಕೊನೆಯ ದಿನಾಂಕ | 26.10.2018 |

| | | |
|---|---|---|
| 06 | ದಂಡ ಶುಲ್ಕ ಸಹಿತ ಮತ್ತು ರಹಿತವಾಗಿ ಡಯಟ್‌ಗೆ ಸಲ್ಲಿಕೆಯಾದ ಎಲ್ಲಾ ಪರೀಕ್ಷಾ ಅರ್ಜಿಗಳು (ಎಂ.ಎಸ್.ಎ), ನಾಮಿನಲ್‌ರೋಲ್, NEFT CHALLAN ಮತ್ತು ಹಣಕಾಸು ನಮೂನೆಗಳನ್ನು ಮಂಡಳಿಗೆ ಡಯಟ್‌ನವರು ಖುದ್ದಾಗಿ ಸಲ್ಲಿಸಲು ಕೊನೆಯ ದಿನಾಂಕ | 30.10.2018 |

ಮೇಲ್ಕಾಣಿಸಿದ ದಿನಾಂಕಗಳನ್ನು ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಸಂಸ್ಥೆಯ ಮುಖ್ಯಸ್ಥರು ಅರ್ಜಿಗಳನ್ನು ಡಯಟ್‌ಗೆ ಸಲ್ಲಿಸಬೇಕು. ಮಂಡಳಿಗೆ ನೇರವಾಗಿ ಸಲ್ಲಿಸುವ ಅರ್ಜಿಗಳನ್ನು ಮಂಡಳಿಯು ಪರಿಗಣಿಸುವುದಿಲ್ಲ. ಅರ್ಜಿಗಳು ತಂತಾನೆ ತಿರಸ್ಕೃತವಾಗುತ್ತವೆ.

4. **ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ಪುನರಾವರ್ತಿತ ವಿದ್ಯಾರ್ಥಿಗಳ ಎಂಎಸ್‌ಎ ಮತ್ತು ನಾಮಿನಲ್‌ರೋಲ್‌ಗಳ ಬಗ್ಗೆ:-**

ಜೂನ್ 2018ರಲ್ಲಿ ಅನುತ್ತೀರ್ಣರಾದ ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ಮತ್ತು ದ್ವಿತೀಯ ಡಿ.ಇಡಿ ವಿದ್ಯಾರ್ಥಿಗಳ ಎಂ.ಎಸ್.ಎ ಗಳನ್ನು ಇದರೊಡನೆ ರವಾನಿಸಿದೆ. ಜೂನ್ 2018ಕ್ಕೂ ಪೂರ್ವದಲ್ಲಿನ ಅನುತ್ತೀರ್ಣ ವಿದ್ಯಾರ್ಥಿಗಳ ಎಂ.ಎಸ್.ಎ ಕಾರಣಾಂತರಗಳಿಂದ ಲಭ್ಯವಿಲ್ಲದಿದ್ದಲ್ಲಿ, ಮಂಡಳಿಗೆ ರೂ.50/- ಶುಲ್ಕ ಪಾವತಿಸಿ ಮುದ್ರಿತ ಎಂ.ಎಸ್.ಎ ಪಡೆಯುವುದು. ಮುದ್ರಿತ ಎಂಎಸ್‌ಎ ಭರ್ತಿ ಮಾಡಿ ವಿದ್ಯಾರ್ಥಿಯ ಸಹಿ, ವಿದ್ಯಾರ್ಥಿಯ ಭಾವಚಿತ್ರ ಅಂಟಿಸಿ, ಸಂಸ್ಥೆಯ ಪ್ರಾಂಶುಪಾಲರು ದೃಢೀಕರಿಸಿ ಸಲ್ಲಿಸುವುದು. **ಖಾಲಿ ಎಂಎಸ್‌ಎಯಲ್ಲಿ ಭರ್ತಿ ಮಾಡಿರುವ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಯನ್ನು ಮಂಡಳಿ ಪರಿಗಣಿಸುವುದಿಲ್ಲ. ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಯು ತಂತಾನೆ ತಿರಸ್ಕೃತವಾಗುತ್ತದೆ.**

5. **ನಾಮಿನಲ್‌ರೋಲ್ ತಯಾರಿಕೆ:-**

ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ಪುನರಾವರ್ತಿತ ವಿದ್ಯಾರ್ಥಿಗಳ ಎಂ.ಎಸ್.ಎಗಳನ್ನು ಕಡ್ಡಾಯವಾಗಿ ಕಳುಹಿಸುವುದರ ಜೊತೆಗೆ ಕ್ರೋಢೀಕೃತ ನಾಮಿನಲ್‌ರೋಲ್ ಭರ್ತಿ ಮಾಡಿ ಕಳುಹಿಸುವುದು ಕಡ್ಡಾಯವಾಗಿದೆ. **ಪುನರಾವರ್ತಿತ ವಿದ್ಯಾರ್ಥಿಗಳ ನಾಮಿನಲ್‌ರೋಲ್‌ಗಳೊಂದಿಗೆ ಪ್ರತಿಯೊಂದು ವಿದ್ಯಾರ್ಥಿಯ ಎಂ.ಎಸ್.ಎ ಇರುವುದನ್ನು ಡಯಟ್ ಪ್ರಾಂಶುಪಾಲರು ಖಚಿತಪಡಿಸಿಕೊಂಡು ದೃಢೀಕರಿಸುವುದು ಕಡ್ಡಾಯವಾಗಿದೆ. ಇಲ್ಲವಾದಲ್ಲಿ, ಅಂತಹ ಪರೀಕ್ಷಾ ಅರ್ಜಿ(ಎಂ.ಎಸ್.ಎ) ತಂತಾನೆ ತಿರಸ್ಕೃತವಾಗುತ್ತವೆ.**

6. **ಪರೀಕ್ಷಾ ಅವ್ಯವಹಾರಗಳಿಂದ ಉಚ್ಚಾಟಿಸಿರುವ (ಎಂ.ಎಲ್.ಪಿ) ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿ**

ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ಪರೀಕ್ಷಾ ಅವ್ಯವಹಾರಗಳಿಂದ ಉಚ್ಚಾಟನೆಗೊಂಡಿರುವ ವಿದ್ಯಾರ್ಥಿಗಳ ಉಚ್ಚಾಟನಾ ವರ್ಷಗಳು ಅವಧಿ ಮುಕ್ತಾಯಗೊಂಡಿದ್ದಲ್ಲಿ, ಆ ವಿದ್ಯಾರ್ಥಿಗಳು ಡಿಸೆಂಬರ್ 2018ರ ಪರೀಕ್ಷಾ ಬರೆಯಲು ಅರ್ಹರಿದ್ದಲ್ಲಿ, ಎಂ.ಎಲ್.ಪಿ ಪ್ರಕರಣವೆಂದು ಪ್ರತ್ಯೇಕವಾಗಿ ನಾಮಿನಲ್ ರೋಲ್ ಸಲ್ಲಿಸುವುದು. ಮಂಡಳಿಯಿಂದ ಹೊರಡಿಸಿರುವ ಜ್ಞಾಪನ ಆದೇಶದ ಪ್ರತಿ ಲಗತ್ತಿಸುವುದು. ನಾಮಿನಲ್‌ರೋಲ್‌ನಲ್ಲಿ ದಪ್ಪ ಅಕ್ಷರದಲ್ಲಿ (Block Letters) MLP ಪ್ರಕರಣವೆಂದು ಕೆಂಪು ಶಾಹಿಯಲ್ಲಿ ನಮೂದಿಸಬೇಕು.

7. **ಫಲಿತಾಂಶ ತಡೆಹಿಡಿದಿರುವ ವಿದ್ಯಾರ್ಥಿಗಳ ಬಗ್ಗೆ:-**

ನ್ಯಾಯಾಲಯದ ಮಧ್ಯಂತರ ಆದೇಶದಂತೆ ಹಾಗೂ ಮತ್ತಿತರೆ ಕಾರಣದಿಂದ ಕೆಲವು ವಿದ್ಯಾರ್ಥಿಗಳ ಫಲಿತಾಂಶವನ್ನು ತಡೆಹಿಡಿಯಲಾಗಿದ್ದಲ್ಲಿ, "ಡಬ್ಲ್ಯೂ" (W) ಎಂದು ಫಲಿತಾಂಶ ಪ್ರಕಟಿಸಲಾಗಿದೆ. ಈ ಬಗ್ಗೆ

ಮಂಡಳಿಯಿಂದ ಮುಂದಿನ ಆದೇಶವಾಗುವವರೆಗೂ ಅಂತಹ ಅಭ್ಯರ್ಥಿಗಳ ಪರೀಕ್ಷಾ ಅರ್ಜಿಗಳನ್ನು (ಎಂ.ಎಸ್.ಎ) ಸಲ್ಲಿಸಬಾರದು. ಒಂದು ವೇಳೆ ಸಲ್ಲಿಸಿದಲ್ಲಿ ಆಯಾ ಡಿ.ಇಡಿ ಪ್ರಾಂಶುಪಾಲರು ಹಾಗೂ ಡಯಟ್ ಪ್ರಾಂಶುಪಾಲರೇ ನೇರ ಹೊಣೆಗಾರರಾಗುತ್ತಾರೆ.

8. **ಪ್ರಯತ್ನಗಳ ಮಿತಿ:-**

ಹಳೇ ಪಠ್ಯಕ್ರಮದಂತೆ ಪುನರಾವರ್ತಿತ ಪ್ರಥಮ ಮತ್ತು ದ್ವಿತೀಯ ಡಿ.ಇಡಿ ವಿದ್ಯಾರ್ಥಿಗಳು ಅಂತಿಮವಾಗಿ ಪರೀಕ್ಷೆ ತೆಗೆದುಕೊಳ್ಳುವ ಕಾಲಾವಕಾಶವು ಜೂನ್-2017ರ ಪರೀಕ್ಷೆಗೆ ಮುಕ್ತಾಯವಾಗಿದೆ. ಹಳೇ ಪಠ್ಯಕ್ರಮದಂತೆ, ಡಿ.ಇಡಿ ಪರೀಕ್ಷೆ ನಡೆಸುವುದಿಲ್ಲ. ಯಾವುದೇ ಕಾರಣಕ್ಕೂ ಹಳೇ ಪಠ್ಯವಸ್ತುವಿನಂತೆ, ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಪರೀಕ್ಷೆ ಬರೆದು ಅನುತ್ತೀರ್ಣ ಹೊಂದಿರುವ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿ, ಎಂ.ಎಸ್.ಎ ಇತ್ಯಾದಿ ಮಂಡಳಿಗೆ ಕಳುಹಿಸಬಾರದು. ಒಂದು ವೇಳೆ ಕಳುಹಿಸಿದಲ್ಲಿ, ಅಂತಹ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಇದನ್ನು ಪರಿಶೀಲಿಸದೇ ಯಥಾವತ್ತಾಗಿ ಮಂಡಳಿಗೆ ಕಳುಹಿಸುವ ಡಯಟ್ ಪ್ರಾಂಶುಪಾಲರ ಮೇಲೆ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು ಹಾಗೂ ಮಂಡಳಿಗೆ ಪಾವತಿಸಿರುವ ಪರೀಕ್ಷಾ ಶುಲ್ಕ ಮಂಡಳಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಹೊಸ ಪಠ್ಯವಸ್ತುವಿನಂತೆ ವಿದ್ಯಾರ್ಥಿಯು ಪ್ರಥಮ ಬಾರಿಗೆ ದ್ವಿತೀಯ ಡಿ.ಇಡಿ ಪರೀಕ್ಷೆಯನ್ನು ಬರೆದ ವರ್ಷದಿಂದ ಮೂರು ವರ್ಷದ ಅವಧಿಯೊಳಗೆ ಪ್ರಥಮ ಮತ್ತು ದ್ವಿತೀಯ ಡಿ.ಇಡಿ ಬಾಹ್ಯ, ಆಂತರಿಕ ಮತ್ತು ಬೋಧನಾ ಅಭ್ಯಾಸಗಳಲ್ಲಿ ಉತ್ತೀರ್ಣರಾಗಿರಬೇಕು. ನಿಕಟ ಸೇವಾ ತರಬೇತಿಯನ್ನು ಈ ಅವಧಿಯೊಳಗೆ ಪೂರ್ಣಗೊಳಿಸಲು ಅವಕಾಶವಿದೆ. ತದನಂತರದ ಅವಧಿಯಲ್ಲಿ ಪುನರಾವರ್ತಿತ ವಿದ್ಯಾರ್ಥಿಗಳು ಡಿ.ಇಡಿ ಪರೀಕ್ಷೆಗಳನ್ನು ತೆಗೆದುಕೊಳ್ಳು ಅರ್ಹರಿರುವುದಿಲ್ಲ. ನಿಗಧಿಪಡಿಸಿರುವ ಅವಕಾಶವನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಲು ಸೂಚಿಸುವುದು. ವಿವರ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ದ್ವಿತೀಯ ಡಿ.ಇಡಿ ವ್ಯಾಸಂಗ ಮಾಡಿ ಪ್ರಥಮಬಾರಿಯಾಗಿ ಪರೀಕ್ಷೆ ಬರೆದ ವರ್ಷ | ಅಂತಿಮ ಕಾಲಾವಕಾಶ/ಅಂತಿಮ ಪ್ರಯತ್ನ |
|---|---|---|
| 01 | ಜೂನ್-2015 | ಜೂನ್-2018 |
| 02 | ಜೂನ್-2016 | ಜೂನ್-2019 |
| 03 | ಜೂನ್-2017 | ಜೂನ್-2020 |

9. **ದ್ವಿತೀಯ ಡಿ.ಇಡಿ ವ್ಯಾಸಂಗ ಮಾಡಿ ಪ್ರಥಮ ಬಾರಿಯಾಗಿ ಜೂನ್ 2015ರಲ್ಲಿ ದ್ವಿತೀಯ ಡಿ.ಇಡಿ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಜೂನ್ 2018ರ ಪರೀಕ್ಷೆ ಅಂತಿಮ ಪ್ರಯತ್ನವಾಗಿರುತ್ತದೆ. ಇಂತಹ ವಿದ್ಯಾರ್ಥಿಗಳು ಡಿಸೆಂಬರ್ 2018ರ ಪೂರಕ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. ಅಂತಹ ವಿದ್ಯಾರ್ಥಿಗಳ ಎಂಎಸ್‌ಎ ಅರ್ಜಿಗಳನ್ನು ಸಲ್ಲಿಸಿದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಮಂಡಳಿಗೆ ಪಾವತಿಸಿದ ಶುಲ್ಕ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**

10. **ಫಲಿತಾಂಶ ಉತ್ತಮಪಡಿಸಿಕೊಳ್ಳಲು ಅನುಮತಿ ನೀಡಿದ್ದು, ಫಲಿತಾಂಶ ಉತ್ತಮಪಡಿಸಿಕೊಳ್ಳಲು ವಿಫಲರಾದವರ ಬಗ್ಗೆ:-**

ಪ್ರಥಮ ಬಾರಿಗೆ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ಫಲಿತಾಂಶ ಉತ್ತಮಪಡಿಸಿಕೊಳ್ಳಲು ವಿದ್ಯಾರ್ಥಿಯು ಅಪೇಕ್ಷಿಸಿ ಅರ್ಜಿ ಸಲ್ಲಿಸಿರುವಂತಹ ವಿದ್ಯಾರ್ಥಿಗಳಿಗೆ ಮಂಡಳಿ ಪರೀಕ್ಷೆ ಬರೆಯಲು

ಅನುಮತಿ ನೀಡಿದ್ದು, ಫಲಿತಾಂಶ ಉತ್ತಮಪಡಿಸಿಕೊಳ್ಳುವಲ್ಲಿ ವಿಫಲರಾದ ವಿದ್ಯಾರ್ಥಿಗಳು ಮನಃ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿಲ್ಲವೆಂದು ಮಂಡಳಿ ಈಗಾಗಲೇ ಸ್ಪಷ್ಟ ಪಡಿಸಿದೆ. ಆದಾಗ್ಯೂ ಕೆಲವೊಂದು ಸಂಸ್ಥೆಗಳ ಮುಖ್ಯಸ್ಥರು ವಿದ್ಯಾರ್ಥಿಗಳನ್ನು ತಪ್ಪುದಾರಿಗೆಳೆದು ಪೂರಕ ಪರೀಕ್ಷೆಗೆ ಫಲಿತಾಂಶ ಉತ್ತಮಪಡಿಸಿಕೊಳ್ಳಲು ಪರೀಕ್ಷಾ ಅರ್ಜಿ ಕಳುಹಿಸಿರುವ ಪ್ರಕರಣಗಳುಂಟು. ಅಂತಹ ಯಾವುದೇ ಅರ್ಜಿಗಳನ್ನು ಮಂಡಳಿಯು ಪರಿಗಣಿಸುವುದಿಲ್ಲ. ಒಂದು ವೇಳೆ ಫಲಿತಾಂಶ ಉತ್ತಮಪಡಿಸಿಕೊಳ್ಳುವಲ್ಲಿ ವಿಫಲರಾಗಿ ಎಂ.ಎಸ್.ಎ ಕಳುಹಿಸಿರುವ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕೂರಿಸಿದ್ದಲ್ಲಿ, ಅಂತಹವರ ಫಲಿತಾಂಶ ರದ್ದುಗೊಳಿಸುವುದರ ಜೊತೆಗೆ ಸಂಸ್ಥೆಯ ಮುಖ್ಯಸ್ಥರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

11. **ಆಯಾ ಪಠ್ಯವಸ್ತುವಿನಂತೆ, ವಿದ್ಯಾರ್ಥಿಗಳು ಪರೀಕ್ಷೆ ಬರೆಯುವ ಬಗ್ಗೆ:-**

ವಿದ್ಯಾರ್ಥಿಗಳು ಈಗಾಗಲೇ ವ್ಯಾಸಂಗ ಮಾಡಿರುವ/ಈಗಾಗಲೇ ಪರೀಕ್ಷೆ ತೆಗೆದುಕೊಂಡಿರುವ ಪಠ್ಯವಸ್ತುವಿನಂತೆ ಪರೀಕ್ಷೆ ಬರೆಯಬೇಕು. ಪಠ್ಯವಸ್ತುವಿನ ಬದಲಾವಣೆಗೆ ಅವಕಾಶವಿಲ್ಲ. ಈ ಬಗ್ಗೆ ಸಂಸ್ಥೆಯ ಪ್ರಾಂಶುಪಾಲರು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡುವುದು. ವಿದ್ಯಾರ್ಥಿಯು ಆಯ್ಕೆ ಮಾಡಲಾದ ಪಠ್ಯವಸ್ತುವಿನಂತೆ ಪರೀಕ್ಷೆ ಬರೆಯದೇ, ಬೇರೆ ಪಠ್ಯವಸ್ತುವಿನಂತೆ ಪರೀಕ್ಷೆ ಬರೆದಿದ್ದಲ್ಲಿ, ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ. ಅಂತಹ ವಿಷಯಗಳಿಗೆ (Subjects) ವಿದ್ಯಾರ್ಥಿಯು ಗೈರುಹಾಜರಾಗಿದ್ದಾರೆಂದು (Absent) ಪರಿಗಣಿಸಲಾಗುವುದು. ಮುಂಬರುವ ಪರೀಕ್ಷೆಯಲ್ಲಿ ವಿದ್ಯಾರ್ಥಿಯು ವ್ಯಾಸಂಗ ಮಾಡಿದ ಪಠ್ಯವಸ್ತುವಿನಂತೆ, ಮನಃ ಪರೀಕ್ಷೆ ಬರೆಯಬೇಕು.

12. **ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ಎಂ.ಎಸ್.ಎ ಯಲ್ಲಿ ಭಾವಚಿತ್ರ ಅಂಟಿಸುವ ಬಗ್ಗೆ:-**

ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ವಿದ್ಯಾರ್ಥಿಗಳು ಈ ಹಿಂದೆ ಪ್ರಥಮ ಬಾರಿಗೆ ಪರೀಕ್ಷೆ ತೆಗೆದುಕೊಂಡ ಸಮಯದಲ್ಲಿ ಓ.ಎಂ.ಆರ್‌ನಲ್ಲಿ ಅಂಟಿಸಿ ಮಂಡಳಿಗೆ ಸಲ್ಲಿಸಿರುವ ಭಾವಚಿತ್ರವನ್ನೇ ಪರಿಗಣಿಸಲಾಗುತ್ತದೆ. ಆದಾಗ್ಯೂ, ಮಂಡಳಿಯ ಪರಿಶೀಲನೆಗಾಗಿ ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ಮನರಾವರ್ತಿತ ವಿದ್ಯಾರ್ಥಿಗಳು ಭಾವಚಿತ್ರವನ್ನು ಎಂಎಸ್‌ಎ ಯಲ್ಲಿ ಕಡ್ಡಾಯವಾಗಿ ಅಂಟಿಸುವುದು. ಎಂಎಸ್‌ಎಯಲ್ಲಿ ನಿಗಧಿತ ಸ್ಥಳಗಳಲ್ಲಿ ವಿದ್ಯಾರ್ಥಿಯ ಭಾವಚಿತ್ರವನ್ನು ಅಂಟಿಸಿ ಸಹಿ ಪಡೆಯಬೇಕು. ಯಾವ ಕಾರಣಕ್ಕೂ ಭಾವಚಿತ್ರಗಳ ಮೇಲೆ ಸಂಸ್ಥೆಯ ಪ್ರಾಂಶುಪಾಲರ ರುಜು ಮತ್ತು ಸಂಸ್ಥೆಯ ಮೊಹರು ಹಾಕತಕ್ಕದ್ದಲ್ಲ.

ಪರೀಕ್ಷಾ ಅರ್ಜಿ ಎಂಎಸ್‌ಎ ಯಲ್ಲಿ ನೈಜ ವಿದ್ಯಾರ್ಥಿಯ ಬದಲು ಬೇರೆ ವಿದ್ಯಾರ್ಥಿಯ ಭಾವಚಿತ್ರ ಅಂಟಿಸಿ, ಪರೀಕ್ಷೆಯಲ್ಲಿ ನಕಲು ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ನೆರವಾಗುವ ಸಂಸ್ಥೆಯ ಪ್ರಾಂಶುಪಾಲರ ಮೇಲೆ ನಿಯಮಾನುಸಾರ ಕಠಿಣ ಕ್ರಮ ಜರುಗಿಸಲಾಗುವುದು. ಇವುಗಳನ್ನು ಪರಿಶೀಲಿಸದೇ, ಖಾತ್ರಿಪಡಿಸಿಕೊಳ್ಳದೇ ಯಥಾವತ್ತಾಗಿ ಕಳುಹಿಸುವ ಜಿಲ್ಲಾ ಡಯಟ್ ಪ್ರಾಂಶುಪಾಲರ ಮೇಲೆ ನಿಯಮಾನುರೀತ್ಯಾ ಕ್ರಮಕೈಗೊಳ್ಳಲಾಗುವುದು.

**ವಿಶೇಷ ಸೂಚನೆ:-**

1. **ಅನುತ್ತೀರ್ಣ ಅಭ್ಯರ್ಥಿಗಳು ಮರುಎಣಿಕೆ/ಮರುಮೌಲ್ಯಮಾಪನ ಫಲಿತಾಂಶಕ್ಕಾಗಿ ನಿರೀಕ್ಷಿಸದೇ ಪರೀಕ್ಷಾ ಶುಲ್ಕ ಮತ್ತು ಪರೀಕ್ಷಾ ಅರ್ಜಿಯನ್ನು ನಿಗಧಿತ ಸಮಯದಲ್ಲಿ ಸಲ್ಲಿಸುವುದು.** ಒಂದು ವೇಳೆ ಮರುಎಣಿಕೆ ಅಥವಾ ಮರುಮೌಲ್ಯಮಾಪನದಲ್ಲಿ ಗಳಿಸಿದ ಪರಿಷ್ಕೃತ ಅಂಕಗಳಂತೆ, ವಿದ್ಯಾರ್ಥಿಯು ಉತ್ತೀರ್ಣರಾದಲ್ಲಿ, ಅಂತಹ ವಿದ್ಯಾರ್ಥಿಗಳು ಮುಂದೆ ಪರೀಕ್ಷೆಗೆ ಹಾಜರಾಗುವಂತಿಲ್ಲ. ಆದಾಗ್ಯೂ ವಿದ್ಯಾರ್ಥಿಯು ಪರೀಕ್ಷೆಗೆ ಹಾಜರಾದಲ್ಲಿ, ಅಂತಹ

ಫಲಿತಾಂಶವನ್ನು ಮಂಡಳಿಯು ರದ್ದುಗೊಳಿಸುವುದು ಹಾಗೂ ಸಂಸ್ಥೆಯ ಪ್ರಾಂಶುಪಾಲರು, ಇಲಾಖಾ, ಮಂಡಳಿ ನಿಯಮಗಳನ್ನು ಉಲ್ಲಂಘಿಸಿರುವುದಕ್ಕೆ ಸಂಸ್ಥೆಯ ಮಾನ್ಯತೆಯನ್ನು ರದ್ದುಗೊಳಿಸುವಂತೆ, ಶಿಫಾರಸ್ಸು ಮಾಡಲಾಗುವುದು.

2. ಪೂರಕ ಪರೀಕ್ಷೆ ಕೇವಲ ಬಾಹ್ಯ (Theory) ಪರೀಕ್ಷೆಗಳಿಗೆ ಮಾತ್ರ ನಡೆಸಲಾಗುವುದು. ಆಂತರಿಕ, ಬೋಧನಾ ಅಭ್ಯಾಸ ಪರೀಕ್ಷೆಗಳನ್ನು ಮುಖ್ಯ ಪರೀಕ್ಷೆಯಲ್ಲಿ ಮಾತ್ರ ನಡೆಸಲಾಗುವುದು. ಆದ್ದರಿಂದ ಬಾಹ್ಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದು, ಆಂತರಿಕ, ಬೋಧನಾ ಅಭ್ಯಾಸ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿದ್ದಲ್ಲಿ, ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿ, ಪರೀಕ್ಷಾ ಶುಲ್ಕ ಡಿಸೆಂಬರ್-2018ರ ಪೂರಕ ಪರೀಕ್ಷೆಗೆ ಸಲ್ಲಿಸಬಾರದು. ಮೇ-2019ರ ಮುಖ್ಯ ಪರೀಕ್ಷೆಗೆ ಪರೀಕ್ಷಾ ಅರ್ಜಿ ಸಲ್ಲಿಸುವುದು.

ಮೇಲ್ಕಂಡ ಎಲ್ಲಾ ಸೂಚನೆಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತಂದು, ಪರೀಕ್ಷಾ ಅರ್ಜಿಗಳು ನಿಯಮಾನುಸಾರ ಇರುವುದನ್ನು ಪರಿಶೀಲಿಸಿದ ನಂತರವೇ ಆಯಾ ಡಯಟ್ ಪ್ರಾಂಶುಪಾಲರಿಗೆ ಸಲ್ಲಿಸಲು ರಾಜ್ಯದ ಎಲ್ಲಾ ಡಿ.ಇಡಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಚಿಸಿದೆ. ಮೇಲ್ಕಂಡಂತೆ ಸಲ್ಲಿಸಿರುವ ಪರೀಕ್ಷಾ ಅರ್ಜಿಗಳು ನಿಯಮಾನುಸಾರ ಇರುವ ಬಗ್ಗೆ, ನಿಗಧಿತ ಶುಲ್ಕ ಪಾವತಿಸಿರುವ ಬಗ್ಗೆ ಪರಿಶೀಲಿಸಿದ ನಂತರವೇ ಅರ್ಜಿಗಳನ್ನು ಮಂಡಳಿಗೆ ಸಲ್ಲಿಸಲು ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ತಿಳಿಸಿದೆ.

ಮೇಲೆ ನೀಡಿರುವ ಸೂಚನೆ ಜೊತೆಗೆ ಸರ್ಕಾರ, ಮಂಡಳಿ ಮತ್ತು ರಾಜ್ಯ ಶಿಕ್ಷಣ ಮತ್ತು ಸಂಶೋಧನೆ ತರಬೇತಿ ನಿರ್ದೇಶನಾಲಯರವರಿಂದ ಡಿ.ಇಎಲ್.ಇಡಿ/ಡಿ.ಇಡಿ ಪರೀಕ್ಷೆಗೆ ಕಾಲಕಾಲಕ್ಕೆ ನೀಡುವ ಎಲ್ಲಾ ಸೂಚನೆಗಳನ್ನು ಸಂಸ್ಥೆಯ ಪ್ರಾಂಶುಪಾಲರು ಹಾಗೂ ಜಿಲ್ಲಾ ಡಯಟ್ ಪ್ರಾಂಶುಪಾಲರು ಪಾಲಿಸಬೇಕು. ಲೋಪದೋಷಗಳು ಕಂಡುಬಂದಲ್ಲಿ ಸಂಬಂಧಿಸಿದವರು ಹೊಣೆಗಾರರಾಗುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ನಿರ್ದೇಶಕರು, ಡಿ.ಇಡಿ ವಿಭಾಗ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003 ಮೊಬೈಲ್ ಸಂಖ್ಯೆ:9535537641, ದೂರವಾಣಿ ಸಂಖ್ಯೆ:080-23460525 ಇವರನ್ನು ಸಂಪರ್ಕಿಸುವುದು.

(ಕೆ.ಎಸ್.ಪುಣಿ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

ಇವರಿಗೆ,

1. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ರಾಜ್ಯದ ಎಲ್ಲಾ ಶಿಕ್ಷಕರ ತರಬೇತಿ ಸಂಸ್ಥೆಗಳ ಪ್ರಾಂಶುಪಾಲರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.
3. ಕಛೇರಿ ಪ್ರತಿ.

# ಕರ್ನಾಟಕ ಸರ್ಕಾರ
# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,
**ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003**

**ಸಂಖ್ಯೆ: ಕ್ಯೂ1/ಡಿ.ಇಎಲ್.ಇಡಿ/ಡಿ.ಇಡಿ/ಪೂ.ಪ/31/2018-19** **ದಿನಾಂಕ:27.09.2018**

## ಪ್ರಥಮ ಡಿ.ಇಎಲ್.ಇಡಿ/ಡಿ.ಇಡಿ ಪೂರಕ ಪರೀಕ್ಷೆಯ ವೇಳಾಪಟ್ಟಿ – ಡಿಸೆಂಬರ್-2018

| ಕ್ರಮ ಸಂಖ್ಯೆ | ದಿನಾಂಕ ಮತ್ತು ವಾರ | ವಿಷಯ | ವಿಷಯ ಸಂಕೇತ ಮತ್ತು ಪಠ್ಯವಸ್ತು | | ಪರೀಕ್ಷಾ ಅವಧಿ | | ಗರಿಷ್ಠ ಅಂಕಗಳು |
|---|---|---|---|---|---|---|---|
| | | | ಹೊಸ ಪಠ್ಯವಸ್ತು (NS) | ಪರಿಷ್ಕೃತ ಪಠ್ಯವಸ್ತು (RS) | ಇಂದ | ವರೆಗೆ | |
| 01 | 10.12.2018 ಸೋಮವಾರ | ಇಂಗ್ಲೀಷ್ ಸಂವಹನಾ ಕೌಶಲಗಳು Communication Skills In English | 120<br>– | –<br>320 | ಬೆಳಿಗ್ಗೆ 10:00 | ಅಪರಾಹ್ನ 11:30 | (25+5) 30<br>25 |
| 02 | 11.12.2018 ಮಂಗಳವಾರ | ಕಲಿಕೆಯನ್ನು ಅನುಕೂಲಿಸುವುದು-ಗಣಿತ Facilitating Learning (LPS) -Mathematics | 116 | 316 | ಬೆಳಿಗ್ಗೆ 10:00 | ಮಧ್ಯಾಹ್ನ 1:00 | 60 |
| 03 | 12.12.2018 ಬುಧವಾರ | ಶೈಕ್ಷಣಿಕ ಮೌಲ್ಯಾಂಕನ ಮತ್ತು ಮೌಲ್ಯಮಾಪನ Educational Assessment & Evaluation | 122 | 322 | ಬೆಳಿಗ್ಗೆ 10:00 | ಅಪರಾಹ್ನ 11:30 | 30 |
| 04 | 13.12.2018 ಗುರುವಾರ | ಶಿಕ್ಷಣ: ಮೂಲ ಪರಿಕಲ್ಪನೆಗಳ ಪರಿಚಯ Education-Introduction to Basic Concepts | 102 | 302 | ಬೆಳಿಗ್ಗೆ 10:00 | ಮಧ್ಯಾಹ್ನ 1:00 | 60 |
| 05 | 14.12.2018 ಶುಕ್ರವಾರ | ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ) ಪ್ರಥಮ ಭಾಷೆ Facilitating Learning (LPS) – First Language ಕನ್ನಡ-Kannada | 104K | 304K | ಬೆಳಿಗ್ಗೆ 10:00 | ಮಧ್ಯಾಹ್ನ 1:00 | 60 |
| | | ಹಿಂದಿ- Hindi | 106H | 306H | | | |
| | | ಉರ್ದು – Urdu | 108U | 308U | | | |
| | | ಮರಾಠಿ – Marati | 110M | 310M | | | |
| | | ತಮಿಳು – Tamil | 112T | 312T | | | |
| | | ತೆಲುಗು – Telugu | 114L | 314L | | | |
| 06 | 15.12.2018 ಶನಿವಾರ | ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ) – ಪರಿಸರ ಅಧ್ಯಯನ Facilitating Learning (LPS)-Environmental Studies | 118 | 318 | ಬೆಳಿಗ್ಗೆ 10:00 | ಮಧ್ಯಾಹ್ನ 1:00 | 60 |

(ಕೆ.ಎಸ್.ಮಣಿ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

# ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003

ಸಂಖ್ಯೆ: ಕ್ಯೂ1/ಡಿ.ಇಎಲ್.ಇಡಿ/ಡಿ.ಇಡಿ/ಪೂ.ಪ/31/2018-19 ದಿನಾಂಕ:27.09.2018

## ದ್ವಿತೀಯ ಡಿ.ಇಎಲ್.ಇಡಿ/ಡಿ.ಇಡಿ ಪೂರಕ ಪರೀಕ್ಷೆಯ ವೇಳಾಪಟ್ಟಿ - ಡಿಸೆಂಬರ್-2018

| ಕ್ರಮ ಸಂಖ್ಯೆ | ದಿನಾಂಕ ಮತ್ತು ವಾರ | ವಿಷಯ | ವಿಷಯ ಸಂಕೇತ ಮತ್ತು ಪಠ್ಯವಸ್ತು | | ಪರೀಕ್ಷಾ ಅವಧಿ | | ಗರಿಷ್ಠ ಅಂಕಗಳು |
|---|---|---|---|---|---|---|---|
| | | | ಹೊಸ ಪಠ್ಯವಸ್ತು (NS) | ಪರಿಷ್ಕೃತ ಪಠ್ಯವಸ್ತು (RS) | ಇಂದ | ವರೆಗೆ | |
| 01 | 10.12.2018 ಸೋಮವಾರ | ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ) ಪ್ರಥಮ ಭಾಷೆ Facilitating Learning (LPS) – First Language ಕನ್ನಡ-Kannada | 244K | 444K | ಮಧ್ಯಾಹ್ನ 2:00 | ಸಾಯಂಕಾಲ 5:00 | 60 |
| | | ಹಿಂದಿ- Hindi | 246H | 446H | | | |
| | | ಉರ್ದು - Urdu | 248U | 448U | | | |
| | | ಮರಾಠಿ - Marati | 250M | 450M | | | |
| | | ತಮಿಳು - Tamil | 252T | 452T | | | |
| | | ತೆಲುಗು - Telugu | 254L | 454L | | | |
| 02 | 11.12.2018 ಮಂಗಳವಾರ | ರೂಢಿಯಾಗಿ ಶಿಕ್ಷಣ Education as Practice | 242 | 442 | ಮಧ್ಯಾಹ್ನ 2:00 | ಸಾಯಂಕಾಲ 5:00 | 60 |
| 03 | 12.12.2018 ಬುಧವಾರ | ಕಲಿಕೆಯನ್ನು ಅನುಕೂಲಿಸುವುದು (ಹಿ.ಪ್ರಾ.ಶಾ)- ಇಂಗ್ಲೀಷ್ Facilitating Learning (HPS)-English | 256 | 456 | ಮಧ್ಯಾಹ್ನ 2:00 | ಸಾಯಂಕಾಲ 5:00 | 60 |
| 04 | 13.12.2018 ಗುರುವಾರ | ಐಚ್ಛಿಕ ವಿಷಯಗಳು (ಯಾವುದಾದರೂ ಒಂದು) Optional Subjects (Any one) | | | | | |
| | | ವಿಜ್ಞಾನ- Science | 258 | 458 | ಮಧ್ಯಾಹ್ನ 2:00 | ಸಾಯಂಕಾಲ 5:00 | 60 |
| | | ಗಣಿತ - Mathematics | 260 | 460 | | | |
| | | ಸಮಾಜ ವಿಜ್ಞಾನ - Social Science | 262 | 462 | | | |

(ಕೆ.ಎಸ್.ಮಣಿ)
ನಿರ್ದೇಶಕರು,
(ಇತರೆ ಪರೀಕ್ಷೆಗಳು)